ಆ) ಕಳೆದ 3 ವರ್ಷಗಳಲ್ಲಿ ಈ ಅತಿಥಿ ಗೃಹದ ಅಭಿವೃದ್ಧಿಗಾಗಿ ವೆಚ್ಚ ಮಾಡಿದ ಹಣವೆಷ್ಟು, ಆದಾಯದಿಂದ ಬಂದ ಹಣವೆಷ್ಟು

ಇ) ಈ ಅತಿಥಿ ಗೃಹದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ನಿಜವಲ್ಲವೆ?

ಈ) ಹಾಗಿದ್ದಲ್ಲಿ, ಈ ಕೊರತೆ ನೀಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಉ) ಈ ಅತಿಥಿ ಗೃಹದ ಸಮಗ್ರ ಅಭಿವೃದ್ಧಿಗೆ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) :

ಅ) ಮೈಸೂರು ಜಿಲ್ಲೆಯಲ್ಲಿನ ಹುಣಸೂರು, ಕೃಷ್ಣರಾಜನಗರ ಮಾರುಕಟ್ಟೆ ಸಮಿತಿಗಳಲ್ಲಿನ ಅತಿಥಿ ಗೃಹವಿದ್ದು, ಕ್ರಮವಾಗಿ 4 ಮತ್ತು 3 ಕೊಠಡಿಗಳು ಇರುತ್ತವೆ.

ಆ)	ವೆಚ್ಚ	ಆದಾಯ
ಹುಣಸೂರು –	ರೂ. 2,09,227/-	ಇಲ್ಲ
ಕೃಷ್ಣರಾಜನಗರ –	ಇಲ್ಲ	ಇಲ್ಲ

ಇ) – ಹೌದು –

ಈ) ಮತ್ತು ಉ) ಬೇಡಿಕೆಗೆ ಅನುಗುಣವಾಗಿ ಸಮಿತಿ ನಿಧಿಯಿಂದ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

1209 (1546) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಮಟ್ಟದಲ್ಲಿ ಗ್ರಾಹಕರ ರಕ್ಷಣೆಗಾಗಿ ಆಯೋಗ ಯಾವಾಗ ರಚಿಸಲಾಗಿದೆ; (ಆಯೋಗದೊಂದಿಗೆ ಸಿಬ್ಬಂದಿಗಳ ವಿವರ ನೀಡುವುದು);

ಆ) ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಗ್ರಾಹಕರ ರಕ್ಷಣೆಗಾಗಿ ಇರುವ ಪೋರಂಗಳೆಷ್ಟು; ಅಲ್ಲಿ ಸದಸ್ಯರೆಷ್ಟು (ವಿವರ ನೀಡುವುದು);

ಇ) ಕಳೆದ ಒಂದು ವರ್ಷದಿಂದ ಮೈಸೂರು ಜಿಲ್ಲೆಯ ಪೋರಂಗೆ ಬಂದಿರುವ ದೂರುಗಳೆಷ್ಟು; ಈ ದೂರುಗಳ ಪೈಕಿ ಬಗೆಹರಿಸಲಾಗಿರುವುದೆಷ್ಟು; ಬಾಕಿ ಇರುವ ಪ್ರಕರಣಗಳೆಷ್ಟು;

ಈ) ಗ್ರಾಹಕರ ರಕ್ಷಣೆಗಾಗಿ ಕೈಗೊಂಡಿರುವ ಕ್ರಮವೇನು?

ಶ್ರೀ ಗೋವಿಂದ ಎಂ.ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) :

ಅ) ರಾಜ್ಯದಲ್ಲಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವನ್ನು 1989–90ನೇ ಸಾಲಿನಲ್ಲಿ ರಚಿಸಲಾಗಿದೆ. ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಮಂಜೂರಾಗಿರುವ, ಭರ್ತಿಯಾಗಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಆ) ಗ್ರಾಹಕ ಸಂರಕ್ಷಣಾ ಕಾಯ್ದೆ 1686ರ ಅಡಿಯಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ತಲಾ ಒಂದರಂತೆ 27 ಜಿಲ್ಲಾ ವೇದಿಕೆಗಳು ಮತ್ತು ಮೂರು ಅಪರ ಜಿಲ್ಲಾ ವೇದಿಕೆಗಳು ಸ್ವತಂತ್ರವಾಗಿ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಹೀಗೆ ಕರ್ನಾಟಕ ರಾಜ್ಯದಲ್ಲಿ ಒಟ್ಟು 30 ಜಿಲ್ಲಾ ವೇದಿಕೆಗಳು ಕಾರ್ಯನಿರ್ವಹಿಸುತ್ತಿವೆ.

ಪ್ರತಿಯೊಂದು ಜಿಲ್ಲಾ ವೇದಿಕೆಯಲ್ಲಿ ಇಬ್ಬರು ಸದಸ್ಯರು ಮತ್ತು ಒಬ್ಬರು ಅಧ್ಯಕ್ಷರು ಇರುತ್ತಾರೆ. ಹೀಗೆ ಎಲ್ಲಾ ಒಟ್ಟು ಜಿಲ್ಲಾ ವೇದಿಕೆಗಳ 30 ಅಧ್ಯಕ್ಷರುಗಳ ಹುದ್ದೆಗಳಲ್ಲಿ 04 ಹುದ್ದೆಗಳು ಮತ್ತು 60 ಸದಸ್ಯರ ಹುದ್ದೆಗಳಲ್ಲಿ 12 ಸದಸ್ಯರ ಹುದ್ದೆಗಳು ಖಾಲಿ ಇರುತ್ತವೆ.

ಇ) ದಿನಾಂಕ: 01–07–2006 ರಿಂದ ದಿನಾಂಕ: 30–06–2007ಕ್ಕೆ ಅಂತ್ಯವಾಗುವ ಒಂದು ವರ್ಷದ ಅವಧಿಗೆ ಸಂಬಂಧಿಸಿದಂತೆ ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯಲ್ಲಿ ಒಟ್ಟು 329 ಫಿರ್ಯಾದುಗಳು ಬಂದಿದ್ದು, ಇವುಗಳ ಪೈಕಿ 245 ಫಿರ್ಯಾದುಗಳನ್ನು ಇತ್ಯರ್ಥಪಡಿಸಲಾಗಿದೆ ಮತ್ತು 84 ಫಿರ್ಯಾದುಗಳು ಇತ್ಯರ್ಥಕ್ಕಾಗಿ ಬಾಕಿ ಇರುತ್ತವೆ.

ಈ) ಗ್ರಾಹಕ ಸಂರಕ್ಷಣಾ ಕಾಯಿದೆ 1986ರ 3ನೇ ಅಧ್ಯಾಯದಡಿಯಲ್ಲಿ ಗ್ರಾಹಕರ ರಕ್ಷಣೆಗಾಗಿ ಕರ್ನಾಟಕ ರಾಜ್ಯದಲ್ಲಿ ಒಂದು ರಾಜ್ಯ ಆಯೋಗ ಮತ್ತು 30 ಜಿಲ್ಲಾ ವೇದಿಕೆಗಳನ್ನು ರಚಿಸಿ, ಗ್ರಾಹಕರ ವ್ಯಾಜ್ಯಗಳನ್ನು ಹಗರ ಲಾಭ ವೆಚ್ಚದಂತೆ ಮತ್ತು ಹೆಚ್ಚಿನ ವಿಳಂಬಕ್ಕೆ ಅಗತ್ಯವಿಲ್ಲದಂತೆ ಇತ್ಯರ್ಥಪಡಿಸಲು ಕ್ರಮವಹಿಸಲಾಗಿದೆ.

ANNEXURE-1

Sl. No.	Name of the Post	No. of post sanctioned	No. of posts filled-up	No. of post vacant
1	2	3	4	5
01	Registrar-cum-Admn, Officer	01	01	-
02	Asst. Registrar-cum-Asst. Administrative Officer	01	01	-
03	Personal Secretary & Judgement Writer	01	01	-
04	Accounts Superintendent	01	01	-
05	Sheristedar	01	-	01
06	Stenographer	04	04	-
07	First Division Assistant	04	01	03
08	Second Division Assistant	03	03	-
09	Typist	02	01	01
10	Driver	02	02	-
11	Peon	09	08	01
	TOTAL	**29**	**23**	**06**

One post of President & two posts of Members have been sanctioned for functioning of the Karnataka State Consumer Disputes Redressal Commission, Out of 2 Members, one post of Member is vacant. Action is being taken to fill up the vacant post immediately.